ಕರ್ನಾಟಕ ಸರ್ಕಾರ

ಸಂಖ್ಯೆ:ಕಂಇ 60 ಎಂಆರ್‌ಆರ್ 2001

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿ ಕಟ್ಟಡ,
ಬೆಂಗಳೂರು, ದಿನಾಂಕ: 2ನೇ ಜುಲೈ 2002.

66

ಸುತ್ತೋಲೆ

ವಿಷಯ:- ಉಚಿತ ಗಣಕೀಕೃತ ಪಹಣಿ ಪ್ರತಿಯನ್ನು ರೈತರಿಗೆ ನೀಡಿದ ನಂತರ ಸ್ವೀಕೃತಿಯನ್ನು ಪಡೆಯುವ ಬಗ್ಗೆ.

ಉಲ್ಲೇಖ:-1) ಸುತ್ತೋಲೆ: ಆರ್ ಡಿ 60 ಎಂ.ಆರ್.ಆರ್ 2001
ದಿನಾಂಕ: 6-05-2002

2) ಪ್ರಧಾನ ಕಾರ್ಯದರ್ಶಿಗಳ ಪತ್ರ.ಸಂಖ್ಯೆ: ಆರ್ ಡಿ 60 ಪಿ ಆರ್ ಎಸ್ 2001
ದಿನಾಂಕ: 15-06-2002.

ಸುತ್ತೋಲೆ ಸಂಖ್ಯೆ: ಆರ್ ಡಿ 60 ಎಂ ಆರ್ ಆರ್ 2001 ದಿನಾಂಕ: 12-04-2002 ಮತ್ತು ಉಲ್ಲೇಖಿತ ಪತ್ರಗಳಂತೆ, ರೈತರಿಗೆ ದಿನಾಂಕ: 15-07-2002 ರೊಳಗೆ ಗಣಕೀಕೃತ ಪಹಣಿಗಳನ್ನು ವಿತರಿಸುವ ಬಗ್ಗೆ ಜಿಲ್ಲಾಧಿಕಾರಿಗಳು ಕ್ರಮ ತೆಗೆದು ಕೊಳುತ್ತಿದ್ದಾರೆ. ರೈತರಿಗೆ ಉಚಿತ ಗಣಕೀಕೃತ ಪಹಣಿಗಳನ್ನು ನೀಡಿದ ನಂತರ ಸ್ವೀಕೃತಿ ಪಡೆಯಲು ಸ್ವೀಕೃತಿ-ನಮೂನೆಯ ಪ್ರಿಂಟೌಟ್ ಪ್ರತಿಯನ್ನು ನೀಡಲು ಎನ್.ಐ.ಸಿ. ಯನ್ನು ಕೋರಲಾಗಿದ್ದು, ನಮೂನೆಯು ಈ ಕೆಳಕಂಡಂತೆ ಇರುತ್ತದೆ.

| ಸರ್ವೆ. ನಂ. | ಅಕ್ಷರ ಭಾಗ | ಹಿಸ್ಸ ನಂ. | ಸ್ವಾಧೀನದಾರರ ಹೆಸರು | ಉಚಿತ ಪಹಣಿಯನ್ನು ವಿತರಿಸಿದ ದಿನಾಂಕ | ಸಹಿ |
|---|---|---|---|---|---|
| | | | | | |

ಮೇಲೆ ತಿಳಿಸಿರುವ ನಮೂನೆಯಲ್ಲಿ ಲಿಖಿತ ಸ್ವೀಕೃತಿವನ್ನು ಪಡೆಯಲು ಗ್ರಾಮ ಲೆಕ್ಕಿಗರಿಗೆ ನಿರ್ದೇಶಿಸುವಂತೆ ಕೋರಲಾಗಿದೆ. ಗ್ರಾಮಾಂತರ ಪ್ರದೇಶಗಳಲ್ಲಿ ಉಚಿತ ಗಣಕೀಕೃತ ಪಹಣಿಗಳನ್ನು ಪಡೆದಿರುವುದಿಲ್ಲ ಎಂಬ ದೂರುಗಳಿಗೆ ಇಂತಹ ಸ್ವೀಕೃತಿಯು ಅತ್ಯಂತ ಅಗತ್ಯವಾಗಿರುತ್ತದೆ.

ಈ ಸುತ್ತೋಲೆಯು ಕಂದಾಯ ಇಲಾಖೆಯ ಇಂಟರ್ ನೆಟ್ ಸೈಟ್ http://www.revdept.kar.nic.in ನಲ್ಲಿ ಲಭ್ಯವಿರುತ್ತದೆ.

(ರಾಜೀವ್ ಚಾವ್ಲಾ)
ಸರ್ಕಾರದ ಅಪರ ಕಾರ್ಯದರ್ಶಿ
ಕಂದಾಯ ಇಲಾಖೆ (ಭೂ ಸುಧಾರಣೆ)

ಇವರಿಗೆ,

ಎಲ್ಲಾ ಜಿಲ್ಲಾಧಿಕಾರಿಗಳು